ಕೈಗೊಳ್ಳಲಾಗಿದೆ. ಕ್ಷ-ಕಿರಣ ತಜ್ಞರ ಹುದ್ದೆಯನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ಮುಖಾಂತರ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಇಲ್ಲ.

ಉ) ಅನ್ವಯಿಸುವುದಿಲ್ಲ.

349(4695); ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ್); ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಗುಲ್ಬರ್ಗಾ ತಾಲ್ಲೂಕಿನ ತಾಜ್‌ಸುಲ್ತಾನ್‌ಪುರ್ ಗ್ರಾಮವು ಗುಲ್ಬರ್ಗಾ ನಗರಕ್ಕೆ ಹೊಂದಿಕೊಂಡ ಗ್ರಾಮವಾಗಿದ್ದು, ಸುಮಾರು 8,000 ಜನಸಂಖ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಗ್ರಾಮದಲ್ಲಿ ಪೋಲೀಸ್ ಇಲಾಖೆಯ ಕೆ.ಎಸ್.ಆರ್.ಪಿ. ಸುಮಾರು 700 ಕುಟುಂಬದ ಪೇದೆಗಳು ವಾಸವಾಗಿದ್ದು, ಅವರು ಪದವಿ ಪೂರ್ವ ಕಾಲೇಜಿಗೆ ಒತ್ತಾಯಿಸುತ್ತಿರುವುದು ನಿಜವೇ;

ಇ) ಈ ಕಾಲೇಜಿಗೆ ಕೆ.ಎಸ್.ಆರ್.ಪಿ. ಯಿಂದ ತಾತ್ಕಾಲಿಕ ಕಟ್ಟಡ ನೀಡಲು ಸಿದ್ದರಿರುವುದು ನಿಜವೇ;

ಈ) ಹಾಗಿದ್ದಲ್ಲಿ ಈ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಗುವುದು?

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಈ ಕುರಿತು ಯಾವುದೇ ಮನವಿಯು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಇ) ಕೆ.ಎಸ್.ಆರ್.ಪಿ. ಯಿಂದ ಕಾಲೇಜಿಗಾಗಿ ಕಟ್ಟಡ ನೀಡುವ ಬಗ್ಗೆ ಯಾವುದೇ ಪ್ರಸ್ತಾವನೆ ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.